**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.619/2023**

**CW -9 PW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಣ್ಣ ಈರೇಶ |
| ತಂದೆ | ಃ | ಚಂದಪ್ಪ |
| ವಯಸ್ಸು | ಃ | 40 |
| ಉದ್ಯೋಗ | ಃ | ಪಿ.ಎಸ್.ಐ |
| ವಾಸಸ್ಥಳ | ಃ | ರಾಯಚೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **24-04-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ನಾನು ದಿನಾಂಕ 02.03.2021 ರಿಂದ ದಿಾಂಕ 08.08.2023 ವರೆಗೆ ಪಿ.ಎಸ್.ಐ ಎಂದು ಗಬ್ಬೂರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 28.04.2022 ರಂದು ಸಂಜೆ 05:00 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಹೇಳಿಕೆ ದೂರಿನ ಆಧಾರದ ಮೇಲೆ ಠಾಣಾ ಗುನ್ನೆ ನಂ.57/2020 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿನಾಂಕ 30.04.2022 ರಂದು ಬೆಳಿಗ್ಗೆ 11 ರಿಂದ 12 ಗಂಟೆಗೆ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಮಾಡಿ ಒಂದು ಜಾಲಿ ಕಟ್ಟಿಗೆ ಮತ್ತು ಹಿಡಿ ಗಾತ್ರದ ಕಲ್ಲನ್ನು ಜಪ್ತಿ ಮಾಡಿಕೊಂಡು ಪಂಚರ ಸಹಿ ಪಡೆದಿರುತ್ತೇನೆ. ನಂತರ ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ಪುರವಣಿ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 20.06.2022 ರಂದು ಚಾಸಾ-4 ಗಾಯಳುವಿನ ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ. ನಂತರ ಆರೋಪಿತರು ನಿರೀಕ್ಷಣ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದರಿದ ಅವರನ್ನು ದಸ್ತಗಿರಿ ಮಾಡಿ ದಸ್ತಗಿರಿ ನಿಯಮಗಳನ್ನು ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಆರೋಪಿತರ ವಿರುದ್ದ ಅಂತಿಮ ವರದಿ ಸಲ್ಲಿಸಿರುತ್ತೇನೆ. ಡಿವೈಎಸ್.ಪಿ ಲಿಂಗಸೂಗೂರು ಇವರ ಪರವಾನಿಗೆ ಪಡೆದು ಆರೋಪಿ 6, 10 ಮತ್ತು 11 ಇವರ ವಿರುದ್ದ ಆರೋಪ ಸಾಬಿತಾಗದೆ ಇರುವುದರಿಂದ ಅವರನ್ನು ಪ್ರಕರಣದಿಂದ ಕೈ ಬಿಡಲಾಗಿದೆ.

ದೂರಿನಲ್ಲಿ ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು, ನಿಪಿ-2 ರಲ್ಲಿ ಸಾಕ್ಷಿ ಸಹಿಯನ್ನು ನಿಪಿ-2 ಸಿ ಎಂದು, ನಿಪಿ-3 ರಲ್ಲಿ ಇದ್ದ ಸಾಕ್ಷಿ ಸಹಿಯನ್ನು ನಿಪಿ-3 ಬಿ ಎಂದು, ಪ್ರ.ವ ವರದಿಯನ್ನು ನಿಪಿ-4 ಎಂದು ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:-</u> ಆರೋಪಿ ಪರ ಶ್ರೀ. ಎಸ್.ಪಿ ವಕೀಲರಿಂದ.**

1 ನೇ ಆರೋಪಿ ಮತ್ತು ಚಾಸಾ-1 ಈ ದೂರು ದಾಖಲು ಆಗುವ 3-4 ದಿನ ಮೊದಲು ಠಾಣೆಗೆ ಬಂದಿದ್ದು ನಾವು ಜಗಳ ಬಗೆಹರಿಸಿ ಕಳಿಸಿರುತ್ತೇವೆ ಎಂದರೆ ಸಾಕ್ಷಿ ಠಾಣೆ ಹೊರಗಡೆ ಅವರವರೇ ಮಾತನಾಡಿಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಆರೋಪಿತರು ಸಾಕ್ಷಿದಾರರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಪಂಚರನ್ನು ರಾಯಕುಂಪಿ ಗ್ರಾಮದಿಂದ ಕರೆದುಕೊಂಡು ಹೋಗಿರುತ್ತೇವೆ. ಪಂಚನಾಮೆ ಕಾಲಕ್ಕೆ ಪಂಚರನ್ನು ಹೊರತು ಪಡಿಸಿ ಸುತ್ತಮುತ್ತಲಿನ ಜನ ಸೇರಿದ್ದರು. ಸದರಿಯವರ ಹೆಸರು ಹೇಳಲು ಬರುವುದಿಲ್ಲ. ಸಾರ್ವಜನಿಕರು ಹೇಳಿಕೆ ನೀಡಿರುವುದಿಲ್ಲ ಸಂಬಂಧಿಕರ ಹೇಳಿಕೆ ಪಡೆದಿರುತ್ತೇನೆ. ಹಿರೇರಾಯಕುಂಪಿ ಗ್ರಾಮದಿಂದ ಗುನ್ನೆ ಸ್ಥಳ 5-6 ಕಿ.ಮೀ ಅಂತರ ಇರುತ್ತದೆ. ಗುನ್ನೆ ಸ್ಥಳ ಹಿರೇರಾಯಕುಂಪಿ ಗ್ರಾಮದಿಂದ ಪಶ್ಚಿಮಕ್ಕೆ ಬರುತ್ತದೆ. ಜಪ್ತಿ ಮಾಡಿಕೊಂಡ ಮುಮಾಗಳು ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತವೆ ಎಂದರೆ ಸಿಗಬಹುದು ಎಂದು ನುಡಿಯುತ್ತಾರೆ. ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ದಾಖಲಾತಿಗಳ ಆಧಾರದ ಮೇಲೆ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ಹನುಮಪೂರು ಗ್ರಾಮದವರು ಮತ್ತು ಆರೋಪಿತರು ಯಾದಗಿರಿ ಜಿಲ್ಲೆಯ ಕ್ವಾಡಾಲ ಗ್ರಾಮದವರು ಎಂದರೆ ಸರಿ. ಚಸಾ-1 ರವರು ರಾಜಕೀಯವಾಗಿ ಪ್ರಭಾವವಿತರಾಗಿದ್ದರಿಂದ ಯಾವುದೇ ಘಟನೆ ಆಗದೇ ಇದ್ದರು ಚಾಸಾ-1 ರವರಿಗೆ ಸಹಾಯ ಮಾಡಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.619/2023**

**CW -8 PW-8**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಡಾಃ ಕಾರ್ತಿಕ ಎಲ್ |
| ತಂದೆ | ಃ | ವಿಜಯ |
| ವಯಸ್ಸು | ಃ | 41 |
| ಉದ್ಯೋಗ | ಃ | ವೈಧ್ಯಾಧಿಕಾರಿ |
| ವಾಸಸ್ಥಳ | ಃ | ರಾಯಚೂರು ರಿಮ್ಸ |
| ಪ್ರಮಾಣಿಕರಿಸಿದ ದಿನಾಂಕ | ಃ | **24-04-2026** |

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ನಾನು 2016 ರಿಂದ ಇಲ್ಲಿವರೆಗೆ ವೈಧ್ಯಾಧಿಕಾರಿ ಎಂದು ರಾಯಚೂರು ರಿಮ್ಸ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 24.04.2022 ರಂದು ಸಂಜೆ 05:55 ಗಂಟೆಗೆ ಗಾಯಾಳು ಚಾಸಾ-4 ಶಂಶುದ್ದೀನ್ ಹೊಡೆದಾಟದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು ಸದರಿಯವರು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಆಗಿರುತ್ತವೆ.

1. ಮೂಗಿನಲ್ಲಿ ರಕ್ತಸ್ರಾವ ಇರಲಿಲ್ಲ
2. ಹೊಟ್ಟೆಯ ಭಾಗದಲ್ಲಿ ನೋವು ಇದ್ದು
3. ಎಡ ಎದೆ ಭಾಗದಲ್ಲಿ ನೋವಿನಿಂದ ಇದ್ದು
4. ಬಲ ಹಣೆ ಹತ್ತಿರ ಊತದಿಂದ ಕೂಡಿದ ಗಾಯ

ಸದರಿ ಗಾಯಗಳುವನ್ನು ಕ್ಷ ಕಿರಣಕ್ಕೆ ಒಳಪಡಿಸಿರುತ್ತೇವೆ. ಸದರಿ ಗಾಯಳುವಿಗೆ ಆದ ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ ಅ ಕುರಿತು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು ನಿಪಿ-3 ಎಂದು ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ನಮೂದು ಮಾಡಿದ ಗಾಯಗಳು ಸಾಮಾನ್ಯವಾಗಿ ಕಲ್ಲು ಮತ್ತು ಕಟ್ಟಿಗೆಯಿಂದ ಹೊಡೆದಾಗ ಆಗುತ್ತವೆ ಎಂದರೆ ಸಾಕ್ಷಿ ಆಗಬಹುದು ಎಂದು ನುಡಿಯುತ್ತಾರೆ.

<u>**ಪಾಟೀ ಸವಾಲು:-**</u> **ಆರೋಪಿ ಪರ ಶ್ರೀ. ಎಸ.ಪಿ ವಕೀಲರಿಂದ.**

ಚಾಸಾ-4 ರವರನ್ನು ಶಬಾನ ಇವರು ಕರೆದುಕೊಂಡು ಬಂದಿದ್ದರು. ಸದರಿ ದಿನ ಗಾಯಾಳು ಹೊರ ರೋಗಿಯಾಗಿ ಚಿಕಿತ್ಸೆ ಪಡೆದಿದ್ದು ಮರುದಿನ ಅಂದರೆ ದಿನಾಂಕ 25.04.2022 ರಂದು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ದಿನಾಂಕ 26.04.2022 ರಂದು ಆಸ್ಪತ್ರೆಯಿಂದ ಬಿಡುಗಡೆ ಆಗಿರುತ್ತಾರೆ. ಸದಿರಿ ನಿಪಿ-3 ರಲ್ಲಿ ದಿನಾಂಕ 25.04.2022 ರಂದು ಒಳರೋಗಿಯಾಗಿ ದಾಖಲು ಆಗಿ ದಿನಾಂಕ 26.04.2022 ರಂದು ಆಸ್ಪತ್ರೆಯಿಂದ ಬಿಡುಗಡೆ ಆಗಿರುತ್ತಾರೆ ಎಂದು ನಮೂದು ಮಾಡಿರುತ್ತೇನೆ. ನಿಪಿ-3 ರಲ್ಲಿ ಕಂಡು ಬಂದ ಗಾಯಗಳು ಸಾಮಾನ್ಯವಾಗಿ ನಡೆದುಕೊಂಡು ಹೋಗುವಾಗ ಎಡವಿ ಬಿದ್ದಾಗ ಆಗುವ ಸಾಧ್ಯತೆ ಇದೆ ಎಂದರೆ ಆಗಬಹುದು ಎಂದು ನುಡಿಯುತ್ತಾರೆ. ಪೋಲಿಸರ ಮಾತು ಕೇಳಿ ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ವರದಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:-** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.